# <u>ಜಯ ಜಾನಕೀ ಕಾಂತ ಜಯ ಸಾಧು ಜನ ವಿನುತ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** The lyrics given without highlights are as per Ref. 1. The lyrics in Ref. 2 are same as in Ref. 1 except few wordings which are marked in green highlights.
4. **Note:** Singer has followed the lyrics same as in Ref. 2 except one word which is marked in yellow highlights.
5. **Note:** Pravachana by Sri. Vid Krishnaraja Kuthpadi is available in 2 volumes. Here only Vol. 1 is uploaded. Interested persons can view Vol 2 using the following link: https://www.youtube.com/watch?v=YokpsQax0ig&list=PLiXde4bHfHX_cVjLZrq86xyWOt77VfJJP&index=8

ರಾಗ: ನಾಟಿ ತಾಳ: ಛಾಪು

ಜಯ ಜಾನಕೀ ಕಾಂತ ಜಯ ಸಾಧು ಜನ ವಿನುತ
ಜಯತು ಮಹಿಮಾನಂತ ಜಯ ಭಾಗ್ಯವಂತ || ಪ ||

(ದಶರಥನ ಮಗ) (ದಶರಥಾತ್ಮಜ) ವೀರ ದಶಕಂಠ ಸಂಹಾರ
ಪಶುಪತೀಶ್ವರ ಮಿತ್ರ ಪಾವನ ಚರಿತ್ರ
ಕುಸುಮ ಬಾಣ ಸ್ವರೂಪ ಕುಶಲ ಕೀರ್ತಿ ಕಲಾಪ
ಅಸಮ ಸಾಹಸ ಶಿಕ್ಷ ಅಂಬುಜದಳಾಕ್ಷ || ೧ ||

ಸಾಮಗಾನ ವಿಲೋಲ ಸಾಧುಜನ ಪರಿಪಾಲ
ಕಾಮಿತಾರ್ಥ (ವಿದಾತ) (ಪ್ರದಾತ) ಕೀರ್ತಿ ಸಂಜಾತ
ಸೋಮ ಸೂರ್ಯ ಪ್ರಕಾಶ ಸಕಲ ಲೋಕಾಧೀಶ
ಶ್ರೀ ಮಹಾ ರಘುವೀರ ಸಿಂಧು ಗಂಭೀರ || ೨ ||

ಸಕಲ ಶಾಸ್ತ್ರ ವಿಚಾರ ಶರಣ ಜನ ಮಂದಾರ
ವಿಕಸಿತಾಂಬುಜ ವದನ ವಿಶ್ವಮಯ ಸದನ
ಸುಕೃತ ಮೋಕ್ಷಾಧೀಶ ಸಾಕೇತ ಪುರವಾಸ
ಭಕುತವತ್ಸಲ ರಾಮ ಪುರಂದರ ವಿಠಲ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ರಾಮಾವತಾರದ ಸ್ವಾರಸ್ಯವನ್ನು ಹೇಳುವ ಪದ.

**ಪಶುಪತೀಶ್ವರ ಮಿತ್ರ** – ರುದ್ರನಿಗೆ ಸ್ನೇಹಿತ.

**ಕುಸುಮ ಬಾಣಸಮ** – ಮನ್ಮಥನಂತೆ ಚೆಲುವ.

**ಸಿಂಧು ಗಂಭೀರ** – ವಾಲ್ಮೀಕಿಯ 'ಸಮುದ್ರ ಇವ ಗಾಂಭೀರ್ಯೇ' ಎನ್ನುವ ನಿರುಪಣೆಯ ಛಾಯೆ.

**ವಿಕಸಿತಾಂಬುಜ ವದನ** – ಅರಳಿದ ತಾವರೆ ಹೂವಂತಿರುವ ಮೊಗ.

**ವಿಶ್ವಮಯ ಸದನ** – ವಿಶ್ವವೆಲ್ಲ ಮನೆಯಾಗಿ ಉಳ್ಳವನು (ಸರ್ವವ್ಯಾಪಿ).

**ಸುಕೃತ ಮೋಕ್ಷಾಧೀಶ** – ಪುಣ್ಯಮಾಡಿದವರಿಗೆ ಸದ್ಗತಿಯನ್ನು ಕಾಣಿಸುವವನು.

**Classification:** Keerthane
**Ankita:** purandara vittala
**Location:** NA
**Category:** Hari Sarvottama, navaratna mAlika, Rama Stuti
**Sub-Category:** rama, sita, sadhu, Dasharatha, kirti, mitra, surya, Chandra, loka, shastra, mukti, sharana,
**Pravachana:** Vid Krishnaraja Kuthpadi
**Explanation:** NA